**1ನೇ ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ., ರವರ ನ್ಯಾಯಾಲಯ, ನಂಜನಗೂಡು**

**ಸಿ.ಸಿಃ 1328/2017**

| | | | |
|---|---|---|---|
| ಸಾಕ್ಷಿದಾರರ ಹೆಸರು | | **ನಾಗರಾಜು** | ಪ್ರಾಸಾಃ 03 |
| ತಂದೆಯ/ಗಂಡನ ಹೆಸರು | | ರಾಚಯ್ಯ | ಚಾಸಾಃ 04 |
| ವಯಸ್ಸು | | 48 ವರ್ಷ | |
| ಕೆಲಸ | | ಕೂಲಿ | ಸಾ ಪ್ರ ಬೋ |
| ವಾಸ | | ತಾಯೂರು, ನಂಜನಗೂಡು | ದಿಃ 22.07.2025 |

**ಮುಖ್ಯ ವಿಚಾರಣೆ ಪ್ರಾಜ್ಞ ಸ.ಸ.ಅ ರವರಿಂದಃ**

ಆರೋಪಿ ಮತ್ತು ಚಾಸಾ 1 ಗೊತ್ತು. ನನಗೆ ಪ್ರಕರಣದ ಬಗ್ಗೆ ಯಾವುದೇ ಮಾಹಿತಿ ಇಲ್ಲ. ಪೊಲೀಸರು ನನ್ನ ಮುಂದೆ ಯಾವುದೇ ಮಹಜರ್ ಕ್ರಮ ಜರುಗಿಸಿರುವುದಿಲ್ಲ. ಪೊಲೀಸರ ಮುಂದೆ ನಾನು ಯಾವುದೇ ಹೇಳಿಕೆ ನೀಡಿಲ್ಲ.

ಸಾಕ್ಷಿಗೆ ಒಂದು ದಾಖಲಾತಿ ತೋರಿಸಿದ್ದು ಅದು ಸ್ಥಳ ಮಹಜರ್ ಆಗಿದ್ದು, ಅದನ್ನು ನಿ.ಪಿ. 3 ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-3(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ನಿರಾಕರಿಸಿದ ಹೇಳಿಕೆಯನ್ನು ನಿ.ಪಿ. 4 ಎಂದು ಗುರುತಿಸಲಾಯಿತು.

(ಈ ಹಂತದಲ್ಲಿ ಸಾಕ್ಷಿಯು ಪ್ರತಿಕೂಲ ಸಾಕ್ಷಿ ನುಡಿಯುತ್ತಿದ್ದಾರೆ. ಮಾನ್ಯ ಎ.ಪಿ.ಪಿ.ಯವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ, ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಅನುಮತಿ ನೀಡಲಾಯಿತು)

**ಪಾಟೀ ಸವಾಲುಃ ಪ್ರಾಜ್ಞ ಸ.ಸ.ಅ ರವರಿಂದಃ**

ದಿಃ 20.04.2017 ರಂದು ಪೊಲೀಸರು ಈ ಪ್ರಕರಣದ ವಿಚಾರ ತಿಳಿಸಿ ಮಹಜರ್ ಗೆ ಸಹಕರಿಸುವಂತೆ ನಮ್ಮನ್ನು ಕೇಳಿಕೊಂಡ ಮೇರೆಗೆ ಅದಕ್ಕೆ ನಾವು ಒಪ್ಪಿದ್ದು ಪೊಲೀಸರು ನಮ್ಮ ಸಮಕ್ಷಮ ಕೃತ್ಯ ಸ್ಥಳದ ಮಹಜರ್ ಕ್ರಮ ಜರುಗಿಸಿರುತ್ತಾರೆ ಎಂದರೆ ಸರಿಯಲ್ಲ. ಆಗ ಸಮಯ ಮಧ್ಯಾಹ್ನ 12 ಗಂಟೆ ಆಗಿರುತ್ತದೆ ಎಂದರೆ ಸರಿಯಲ್ಲ. ಆಗ ನನ್ನೊಂದಿಗೆ ಚಾಸಾ 5 ರವರು ಹಾಜರಿದ್ದರು ಎಂದರೆ ಸರಿಯಲ್ಲ. ನಮ್ಮ ಸಮಕ್ಷಮ

ಪೊಲೀಸರು 2 1/5 ಅಡಿ ಉದ್ದದ ಮರದ ದೊಣ್ಣೆಯನ್ನು ಅಮಾನತು ಪಡಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಈಗ ಓದಿ ಕೇಳಿಸಿಕೊಂಡ ನಿ.ಪಿ. 4 ರಂತೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ** ಆರೋಪಿ ಪರ ವಕೀಲರಿಂದ ಇಲ್ಲ ಎಂದು ತಿಳಿಸಿರುತ್ತಾರೆ.

**ಮರುವಿಚಾರಣೆಃ ಇಲ್ಲ**

ನನ್ನ ಉಕ್ತಲೇಖನದ ಮೇರೆಗೆ ತೆರದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.

**ಓ ಹೇ ಕೇ ಸ ಇದೆ ಎಂ ಒ**

**1 ನೇ ಹೆಚ್ಚುವರಿ ಸಿ.ಜೆ ಮತ್ತು ಪ್ರದನ್ಯಾದಂ**

**ನಂಜನಗೂಡು**